# ಡಾ: ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ






## ಗಂಗಾ ಕಲ್ಯಾಣ ಯೋಜನೆ

### ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ:

- ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯನ್ನು 1984 ರಿಂದ ಅನುಷ್ಟಾನಗೊಳಿಸಲಾಗುತ್ತಿದೆ.

- ಈ ಯೋಜನೆಯಡಿ 1½ ಎಕರೆಯಿಂದ 5.00 ಎಕರೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತೀ ಸಣ್ಣ ರೈತರ ಖುಷ್ಕಿ ಜಮೀನಿನಲ್ಲಿ ಕೊಳವೆಬಾವಿ ಕೊರೆಸಿ, ಪಂಪ್‌ಸೆಟ್ ಅಳವಡಿಸಿ, ವಿದ್ಯುದ್ಧೀಕರಣಗೊಳಿಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಮಲೆನಾಡು ಪ್ರದೇಶಗಳಾದ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಕಾರವಾರ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ 1.00 ಎಕರೆ ಜಮೀನು ಹೊಂದಿರುವವರಿಗೂ ಸಹ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.

- ಈ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು(ಗ್ರಾ), ಬೆಂಗಳೂರು(ನಗರ), ತುಮಕೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿದಿರುವುದರಿಂದ ಈ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ 4.50 ಲಕ್ಷಕ್ಕೆ ಹೆಚ್ಚಿಸಲಾಗಿದ್ದು, ಇದರಲ್ಲಿ ರೂ. 4.00 ಲಕ್ಷ ಸಹಾಯಧನವಿದ್ದು, ಉಳಿದ ರೂ. 50,000/- ಅವಧಿ ಸಾಲವಾಗಿರುತ್ತದೆ (10 ವಾರ್ಷಿಕ ಕಂತುಗಳಲ್ಲಿ ಮರು ಪಾವತಿ ಮಾಡಬೇಕು. ಸಾಲದ ಮೊತ್ತಕ್ಕೆ ಶೇ. 6 ರಷ್ಟು ಬಡ್ಡಿ ವಿಧಿಸಲಾಗುವುದು.

- ಇತರೆ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ. 3.50 ಲಕ್ಷ ನಿಗದಿಪಡಿಸಿದ್ದು, ಇದರಲ್ಲಿ ರೂ. 3.00 ಲಕ್ಷ ಸಹಾಯದನ ಮತ್ತು ರೂ. 0.50 ಲಕ್ಷ ಅವಧಿಸಾಲವಾಗಿರುತ್ತದೆ.

- ವಿದ್ಯುದ್ದೀಕರಣಕ್ಕೆ ಘಟಕ ವೆಚ್ಚದ ಸಹಾಯಧನದ ಮಿತಿಯಲ್ಲಿ ಪ್ರತಿ ಕೊಳವೆಬಾವಿಗೆ ರೂ. 50,000/-ಗಳನ್ನು ಸಂಬಂಧಿಸಿದ ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

**ಗಂಗಾ ಕಲ್ಯಾಣ/ವೈಯಕ್ತಿಕ ಕೊಳವೆಬಾವಿ ಯೋಜನೆಯಡಿ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಬೇಕು**

- ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗದ ಫಲಾನುಭವಿಗಳ ಜಮೀನಿನಲ್ಲಿ ಕೊಳವೆಬಾವಿಯನ್ನು ಯಾವುದೇ ಕಾರಣಕ್ಕೂ ಕೊರೆಯಬಾರದು. (ಕೇಂದ್ರಕಛೇರಿಯಿಂದ ನೀಡುವ ಹೆಚ್ಚುವರಿ ಗುರಿಗೆ ಅನ್ವಯಿಸುವುದಿಲ್ಲ)
- ವಿದ್ಯುತ್ ಮಂಜೂರಾತಿ ಪಡೆಯಲು ಅಸಾಧ್ಯವಾದ ಸ್ಥಳಗಳಲ್ಲಿ ಕೊಳವೆಬಾವಿಗಳನ್ನು ಕೊರೆಯಬಾರದು.
- ಜಿಲ್ಲಾ ವ್ಯವಸ್ಥಾಪಕರು ಒಂದೇ ಕಂತಿನಲ್ಲಿ ಎಲ್ಲಾ ಫಲಾನುಭವಿಗಳನ್ನೊಳಗೊಂಡಂತೆ ಒಂದು ಕಾರ್ಯಾದೇಶವನ್ನು ಗುತ್ತಿಗೆದಾರರಿಗೆ ನೀಡಿ ಭೂ ಭೌತ ಸರ್ವೇಕ್ಷಣೆ ಮಾಡಿಸಿ ಅಂತರ್ಜಲ ದೊರೆಯುವ ಸಿಂಧು ಬಿಂಧುಗಳಲ್ಲಿ ನಿಗಮದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಕೊಳವೆಬಾವಿಗಳನ್ನು ಕೊರೆಯುವುದು. ವೈಯಕ್ತಿಕವಾಗಿ ಫಲಾಪೇಕ್ಷಿಗಳಿಗೆ ಕಾರ್ಯಾದೇಶ ನೀಡತಕ್ಕದ್ದಲ್ಲ.ಅಲ್ಲದೆ ಕೊಳವೆಬಾವಿ ಕೊರೆಯುವ ಮುನ್ನ ಫಲಾನುಭವಿಗೆ ಮಂಜೂರಾತಿ ಆದೇಶವನ್ನು ನೀಡುವುದು.
- ಜಿ.ಪಿ.ಎಸ್. ನಿಂದ ಪ್ರತಿ ಕೊಳವೆಬಾವಿಯ ಅಕ್ಷಾಂಶ&ರೇಖಾಂಶದ ವಿವರಗಳ ಮಾಹಿತಿಯನ್ನು ನಮೂನೆ–03ರಲ್ಲಿ ದಾಖಲಿಸಿ ಹಣ ಪಾವತಿಸಲು ಬಿಲ್ಲುಗಳನ್ನು ಸಲ್ಲಿಸುವುದು.
- ಫಲಾನುಭವಿಗಳಿಂದ ಭೂ ವಿಜ್ಞಾನಿಗಳಿಗೆ ಮತ್ತು ಗುತ್ತಿಗೆದಾರರಿಗೆ ಹಣ ಪಾವತಿಸಲು ಅವಕಾಶ ನೀಡಬಾರದು.
- ಅಸಿಂಧು ಎಂದು ಜಲಬಿಂಧು ಗುರುತಿಸಿದ ಫಲಾನುಭವಿಗಳ ಜಮೀನಿನಲ್ಲಿ ಪುನ: ಸರ್ವೇಕ್ಷಣೆ ಮಾಡಲು ತಿಳಿಸಬಾರದು. ಬದಲಿಗೆ ಫಲಾಪೇಕ್ಷಿಗೆ ಹಿಂಬರಹ ನೀಡಬೇಕು.
- ಫಲಾನುಭವಿಯಿಂದ ಕೊಳವೆಬಾವಿ ಕೊರೆಯುವ ಮೊದಲೇ ನಮೂನೆ–3, ನಮೂನೆ–ಅ ಮತ್ತು ವೆಲ್‌ಲಾಗ್‌ಗಳಿಗೆ ಸಹಿ ಪಡೆಯಬಾರದು.
- ಕೊಳವೆಬಾವಿ ಕೊರೆದು ವಿಫಲವಾದ ಕೊಳವೆಬಾವಿಗೆ ಮತ್ತೊಮ್ಮೆ ಬಾವಿ ಕೊರೆಯಲು ಗುತ್ತಿಗೆದಾರ ಕಂಪನಿಗೆ ಒತ್ತಡ ತರಬಾರದು. ವಿಫಲವಾದ ಕೊಳವೆಬಾವಿಗಳಿಂದ ಕೇಸಿಂಗ್ ಪೈಪ್ ಹೊರತೆಗೆದು ಸಂಪೂರ್ಣವಾಗಿ ಮಣ್ಣಿನಿಂದ ಮುಚ್ಚಲು ಗುತ್ತಿಗೆದಾರರು ಕ್ರಮವಹಿಸತಕ್ಕದ್ದು. ಈ ಅಂಶವನ್ನು ಜಿಲ್ಲಾ ವ್ಯವಸ್ಥಾಪಕರು ದೃಢಪಡಿಸಿ ಕೊಳ್ಳತಕ್ಕದ್ದು.
- ಗುತ್ತಿಗೆದಾರರ ಬಿಲ್ಲುಗಳೊಂದಿಗೆ ಎಂ.ಬಿ, ಕಾಂಟ್ರಕ್ಟ್ ಸರ್ಟಿಫಿಕೇಟ್, ಮೂರನೇ ಸಂಸ್ಥೆಯು ತಪಾಸಣೆ ಮಾಡಿದ ಪೂರ್ವ ಮತ್ತು ನಂತರದ ದೃಢೀಕರಣ ಪತ್ರಗಳನ್ನು ಹಣ ಪಾವತಿಗಾಗಿ ಕೇಂದ್ರಕಛೇರಿಗೆ ಸಲ್ಲಿಸುವುದು.
- ಕೊಳವೆಬಾವಿ ಕೊರೆಯುವ ಸಂದರ್ಭದಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು/ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರಬೇಕು.

- ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಹೊರಡಿಸಿರುವ ಟೆಂಡರ್ ಅಧಿಸೂಚನೆಯಂತೆ, ಕೆಲಸದ ಒಡಂಬಡಿಕೆಯಂತೆ ಹಾಗೂ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳಂತೆ ಕ್ರಮ ಕೈಗೊಳ್ಳುವುದು.
- ಈ ಯೋಜನೆಯಡಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಶೇ.100 ರಷ್ಟು, ಜಿಲ್ಲಾ ವ್ಯವಸ್ಥಾಪಕರು ಶೇ.25 ರಷ್ಟು ಹಾಗೂ ಉಪ ಪ್ರಧಾನ ವ್ಯವಸ್ಥಾಪಕರು ಶೇ.10ರಷ್ಟು ಸ್ಥಳ ಪರಿಶೀಲನೆ ಮಾಡತಕ್ಕದ್ದು. ಕೊಳವೆಬಾವಿ ಕೊರೆದ ಬಿಲ್ಲಿನ ಹಣ ಪಾವತಿಸಲು ಕೇಂದ್ರಕಛೇರಿಗೆ ಶಿಫಾರಸ್ಸಿನೊಂದಿಗೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸುವುದು.
- ಕೊಳವೆಬಾವಿ ಕೊರೆದು, ಕೇಂದ್ರಕಛೇರಿಗೆ ಬಿಲ್ಲಿನ ಹಣ ಪಾವತಿಸುವ ಮುನ್ನ ನಿಯಮಾನುಸಾರ ಗಂಗಾ ಕಲ್ಯಾಣ ಯೋಜನೆಯಡಿ ನಿರ್ವಹಿಸಲಾದ ರಿಜಿಸ್ಟರ್‌ನಲ್ಲಿ ಎಲ್ಲಾ ಮಾಹಿತಿಗಳನ್ನು ದಾಖಲಿಸತಕ್ಕದ್ದು. ಹಾಗೂ ವಿದ್ಯುತ್ ಸಂಪರ್ಕಕ್ಕಾಗಿ ಎಸ್ಕಾಂನಲ್ಲಿ ಅರ್ಜಿಯನ್ನು ನೋಂದಾಯಿಸತಕ್ಕದ್ದು,
- ವಿಫಲವಾದ ಕೊಳವೆಬಾವಿಗಳ ವಿವರಗಳನ್ನು ಕಡ್ಡಾಯವಾಗಿ ವಹಿಯಲ್ಲಿ ನಿರ್ವಹಿಸಿ ಪ್ರತಿ ಮಾಹೆ ಕೇಂದ್ರಕಛೇರಿಗೆ ಮಾಹಿತಿ ಸಲ್ಲಿಸತಕ್ಕದ್ದು.
- ಜಿಲ್ಲಾ ವ್ಯವಸ್ಥಾಪಕರು ಒಂದೇ ಕಂತಿನಲ್ಲಿ ಎಲ್ಲಾ ಫಲಾನುಭವಿಗಳನ್ನೊಳಗೊಂಡಂತೆ ಒಂದೇ ಬಾರಿಗೆ ಗುತ್ತಿಗೆದಾರರಿಗೆ ಕ್ಲಿಯರೆನ್ಸ್ ನೀಡಿ, ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಿಸುವುದು.
- ವಿದ್ಯುದ್ದೀಕರಣಕ್ಕಾಗಿ ಎಸ್ಕಾಂನಲ್ಲಿ ನೋಂದಣಿಗೆ ಬಾಕಿ ಇರುವ ಕೊಳವೆಬಾವಿಗಳನ್ನು ನೋಂದಾಯಿಸುವ ಹಂತದಲ್ಲೇ ಅಗ್ರಿಮೆಂಟ್, ಪಹಣಿ, ಕೊಳವೆಬಾವಿಗೆ ಪಂಪ್‌ಸೆಟ್ ಅಳವಡಿಸಿರುವ ಛಾಯಾಚಿತ್ರ ಮತ್ತು ಪ್ಯಾನಲ್ ಬೋರ್ಡ್ ಜೋಡಿಸಿರುವ ಛಾಯಾ ಚಿತ್ರಗಳನ್ನು ಕಡ್ಡಾಯವಾಗಿಅಪ್-ಲೋಡ್ ಮಾಡಬೇಕಾಗಿರುತ್ತದೆ. ಈ ಕಾರಣಕ್ಕಾಗಿ ಕೊಳವೆಬಾವಿಗಳಿಗೆ ಪಂಪ್‌ಸೆಟ್ ಸರಬರಾಜು ಮಾಡುತ್ತಿದ್ದಾಗಲೇ ಕೊಳವೆಬಾವಿಗಳಿಗೆ ಅಳವಡಿಸಿ, ಪಂಪ್ ಅಳವಡಿಸಿದ ಮತ್ತು ಪ್ಯಾನಲ್ ಬೋರ್ಡ್ ಜೋಡಿಸಿದ ಛಾಯಾ ಚಿತ್ರಗಳನ್ನು ಪ್ರತಿ ಬಿಲ್ಲಿನೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
- ನಮೂನೆ-4ಬಿನಲಿ ್ಲಕಡ್ಡಾಯವಾಗಿ ಫಲಾನುಭವಿ, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ಮತ್ತು ಎಲೆಕ್ಟ್ರೀಕಲ್ ಗುತ್ತಿಗೆದಾರರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.